ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಹೇಳಬೇಕು. ಇದನ್ನು ಓದುವುದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ. ದಯವಿಟ್ಟು ಕನ್ನಡದಲ್ಲಿ ಓದಿ. ಮಾನ್ಯ ಹಾರ್ನಹಳ್ಳಿ ರಾಮಸ್ವಾಮಿಯವರು ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿದ ಜನ. ಅವರು ಇಲ್ಲಿ ನಿಂತುಕೊಂಡು ಇಂಗ್ಲೀಷ್‌ನಲ್ಲಿ ಓದುವುದಕ್ಕೆ ಶುರು ಮಾಡತಕ್ಕದ್ದು ನಮ್ಮ ಹಣೇಬರಹ. ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಇಂಗ್ಲೀಷ್‌ನಲ್ಲಿ ಓದುವುದನ್ನು ನಿಲ್ಲಿಸಿ.

ಲಿಂಗನಮಕ್ಕಿ ಪವರ್ ಹೌಸ್‌ನಲ್ಲಿ ಸ್ಲೂಸ್‌ಗೇಟ್‌ಗಳ ರಿಪೇರಿ ಮಾಡದಿರುವುದರಿಂದ ಉಂಟಾಗಿರುವ ತೊಂದರೆ ಮಂತ್ರಿಗಳ ಹೇಳಿಕೆ

† ಶ್ರೀ ಹಾರ್ನಹಳ್ಳಿರಾಮಸ್ವಾಮಿ:- ಇಂಗ್ಲೀಷ್‌ನಲ್ಲಿದೆ, ಅದನ್ನು ಕನ್ನಡಕ್ಕೆ ಭಾಷಾಂತರ ಮಾಡಿಕೊಂಡು ಹೇಳುತ್ತೇನೆ. ಲಿಂಗನಮಕ್ಕಿಯಲ್ಲಿ 3 ಸ್ಲೂಯಿಸ್ ಇವೆ. ಅದರಲ್ಲಿ ಒಂದನೇ ಸ್ಲೂಯಿಸ್ ಒಳ್ಳೆಯ ಕಂಡಿಷನ್‌ನಲ್ಲಿದೆ. ಅದು ಕೆಲಸಮಾಡುತ್ತಿದೆ. ಇದು 10 ಯೂನಿಟ್‌ಗಳಲ್ಲಿ ಪವರ್‌ನ್ನು ಜನರೇಟ್ ಮಾಡುವುದಕ್ಕೆ ಸಾಕಷ್ಟು ನೀರನ್ನು ಒದಗಿಸುತ್ತದೆ. ಲಿಂಗನಮಕ್ಕಿಯಲ್ಲಿ 2ಯೂನಿಟ್‌ಗಳ ಪೈಕಿ 1ಯೂನಿಟ್ ಕೆಲಸ ಮಾಡುತ್ತಿಲ್ಲ. ಇನ್ನೊಂದು ಕೆಲಸಮಾಡುತ್ತಿದೆ. 3ನೇ ಸ್ಲೂಯಿಸ್ ರಿಪೇರಿಯಲ್ಲಿದೆ. ಆದರೂ ಈ ಸ್ಲೂಯಿಸ್‌ನಿಂದಲೂ ಆಗಿಂದಾಗ್ಗೆ ನೀರನ್ನು ಬಿಡುತ್ತಿದೆ ಮತ್ತು ಅವಶ್ಯಕತೆ ಇದ್ದಾಗ ಈ ಸ್ಲೂಯಿಸ್‌ನಲ್ಲಿ ನೀರನ್ನು ಬಿಡುವುದಕ್ಕೆ ಅವಕಾಶವಿದೆ. ಜೂನ್ 93ರೊಳಗೆ ಇದನ್ನು ಪೂರ್ಣವಾಗಿ ರಿಪೇರಿ ಮಾಡಿ ಮುಗಿಸುತ್ತೇವೆ. ಎರಡನೇ ಸ್ಲೂಯಿಸ್‌ನ ರಿಪೇರಿ ಕೆಲಸ ನಡೆಯುತ್ತಿದೆ. ಇದೂ ಕೂಡ 93ರ ಜೂನ್‌ನೊಳಗೆ ಮುಗಿಯುತ್ತದೆ. 3 ದಶಕಗಳಿಂದ ಈ ಗೇಟ್ ಮುಚ್ಚಿ ಹೋಗಿದೆ ಎಂದು ಪತ್ರಿಕೆಗಳಲ್ಲಿ ಬಂದಿರತಕ್ಕದ್ದು ಸರಿಯಲ್ಲ. 3 ದಶಕಗಳಿಂದ ಅವಶ್ಯಕವಾದಾಗಲೆಲ್ಲಾ ಇದನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಲಿಂಗನಮಕ್ಕಿ ಪವರ್‌ಹೌಸ್ ಏನಿದೆ ಇದು ಕೆಟ್ಟು ಹೋದಾಗ ಮಾತ್ರ ಸ್ಲೂಯಿಸ್ ಗೇಟನ್ನು ತೆರೆಯುತ್ತೇವೆ. ಆದರೆ ಇದು ಇನ್ನೂ ಅಂಥ ಪರಿಸ್ಥಿತಿಗೆ ಬಂದಿಲ್ಲ. ಎರಡು ಯೂನಿಟ್‌ಗಳು ಪೂರ್ತಿ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಿವೆ. ಆದುದರಿಂದ ಯಾವುದೇ ತುರ್ತು ಪರಿಸ್ಥಿತಿಯೂ ಈ ಲಿಂಗನಮಕ್ಕಿ ಪ್ರಾಜೆಕ್ಟ್‌ನಲ್ಲಿ ಉಂಟಾಗಿಲ್ಲ. ಪತ್ರಿಕೆಗಳಲ್ಲಿ ಬಂದಿರತಕ್ಕ ರೀತಿಯಲ್ಲಿ ಇಲ್ಲಿನ ಕೆಲಸ ನಿಂತಿದೆ ಎಂದು ಹೇಳತಕ್ಕದ್ದು ಸರಿಯಲ್ಲ. ಈ ಗೇಟುಗಳು 1991ರಿಂದ ಕೆಟ್ಟು ಹೋಗಿವೆ, 50ಲಕ್ಷ ರೂ. ಇವುಗಳ ರಿಪೇರಿಗಾಗಿ ಖರ್ಚು ಮಾಡಲಾಗಿದೆ ಎಂದು ಹೇಳತಕ್ಕದ್ದೂ ಕೂಡ ಸರಿಯಲ್ಲ. ಎರಡು ಯೂನಿಟ್‌ಗಳು ಪೂರ್ತಿ ಪ್ರಮಾಣದಲ್ಲಿ ಕೆಲಸ ಮಾಡುತ್ತಿವೆ. ವಿದ್ಯುಚ್ಛಕ್ತಿ ತಯಾರು ಮಾಡತಕ್ಕಂಥಾದ್ದು ನಡೆಯುತ್ತಿದೆ. ಆದ್ದರಿಂದ ಯಾವ ತುರ್ತು ಪರಿಸ್ಥಿತಿಯೂ ಲಿಂಗನಮಕ್ಕಿ ಪ್ರಾಜೆಕ್ಟಿನಲ್ಲಿ ಉಂಟಾಗಿಲ್ಲ. ಪತ್ರಿಕೆಯಲ್ಲಿ ಬಂದ ರೀತಿಯಲ್ಲಿ ಈಗಾಗಲೇ ಕೆಲಸ ನಿಂತಿದೆ ಎಂದು ಹೇಳುವುದು ಸರಿಯಲ್ಲ. ಗೇಟ್ ಕೆಟ್ಟು ಹೋಗಿದೆ ಎಂದು ಹೇಳುವುದು ಸರಿಯಲ್ಲ. ತಲಕಳಲೆ ಡ್ಯಾಮಿನ ಒಡ್ಡಿನ ಕೆಳಭಾಗದಲ್ಲಿ ಸ್ಟೀಲ್‌ಲೈನಿಂಗ್ ಉಕ್ಕಿನ ಕವಚವನ್ನು ಮಾಡಬೇಕೆಂದು ಒಂದು ಪ್ರಪೋಸಲ್ ಇತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಇಂಗ್ಲೀಷ್‌ನಲ್ಲೇ ಓದಿ ಸರ್

ಶ್ರೀ ಶಿವಾನಂದ ಎಚ್. ಕೌಜಲಗಿ:- ಇಂಗ್ಲೀಷ್‌ನಲ್ಲೇ ಓದಿ

ಶ್ರೀ ವಾಟಾಳ್ ನಾಗರಾಜ್:- ಇಡೀ ಸದನವೇ ಹೇಳಿದರೂ ನಾನು ಅದಕ್ಕೆ ಒಪ್ಪುವುದಕ್ಕೆ ತಯಾರಿಲ್ಲ. ಅವಕಾಶ ಕೊಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಯಾವುದರಲ್ಲಿ ಅಚ್ಚಾಗಿ ಬಂದಿದೆಯೋ ಅದರಲ್ಲಿ ಓದಬೇಕಾಗುತ್ತದೆ. ಅಧಿಕಾರಿಗಳು ಸಹಿ ಹಾಕಿ ಕೊಡಬೇಕಾಗುತ್ತದೆ. ಹಾಗಾದರೆ ನಮಗೆ ಕಾಪಿ ಕೊಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ತಲಕಳಲೆ ಒಡ್ಡಿಗೆ ಉಕ್ಕಿನ ಕವಚವನ್ನು ಕೆಳಭಾಗದಲ್ಲಿ ಹಾಕಬೇಕೆಂದು ಯೋಚನೆ ಇತ್ತು. ಸರಕಾರವು ಬದಲಾವಣೆಯಾದಾಗ ಅದನ್ನು ಕೈಬಿಟ್ಟರೆಂದು ಹೇಳುವುದು ಸರಿಯಲ್ಲ. ಫ್ರೆಂಚ್ ಕಂಪೆನಿ ಒಂದು ಮಾಡುತ್ತೇವೆಂದು ಹೇಳಿತ್ತು. ಆ ಕಾಲದಲ್ಲಿ 13 ಕೋಟಿ ರೂಪಾಯಿ ವೆಚ್ಚವಾಗುತ್ತದೆಂದು ಹೇಳಿದ್ದರು ಮತ್ತು ಅದಕ್ಕೆ ಟೆಕ್ನಿಕಲ್ ಆಡ್ವೈಸ್ ಕೊಟ್ಟಿದ್ದಕ್ಕೆ 6 ಕೋಟಿ ರೂಪಾಯಿ ಕೊಡಬೇಕೆಂದು ಅವರು ಒಂದು ನಿಯಮ ಹಾಕಿದ್ದರು. ಈಗ ರೂಪಾಯಿ ಬೆಲೆ ಇಳಿದಾಗ ಈಗ ನಾವು ಆರ್ಡರ್ ಉಕ್ಕಿನ ಕವಚಕ್ಕೆ ಕೊಟ್ಟರೆ ಅದರ ಬೆಲೆ 40 ಕೋಟಿ ರೂಪಾಯಿಯಾಗುತ್ತದೆ. ಆದರೆ ಅದೇ ಕೆಲಸ ಮಾಡುವುದಕ್ಕೆ ಕೆಳಗಡೆ ಒಂದು ಒಡ್ಡನ್ನು ಹಾಕಿದರೆ 25 ಕೋಟಿಯಲ್ಲಿ ಮುಗಿಸಬಹುದು. ಇವೆರಡೂ ಇಲ್ಲವೆಂದು ನಮ್ಮ ಇಂಜಿನಿಯರುಗಳು, ಎಕ್ಸ್‌ಪರ್ಟ್ ಇಂಜಿನಿಯರುಗಳನ್ನು ನೇಮಕ ಮಾಡಿಕೊಂಡಿದ್ದೇವೆ. ನೀರಿನ ಕೆಳಭಾಗದಲ್ಲಿ ಹೋಗಿ ಎಲ್ಲೆಲ್ಲಿ ನೀರು ಲೀಕ್ ಆಗುತ್ತಿತ್ತು. ಅಂತಹ ಕಡೆಗಳಲ್ಲಿ ಅದನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಪ್ರತಿದಿನ ಏಳೂವರೆ ಕ್ಯೂಸೆಕ್ಸ್ ನೀರು ವ್ಯರ್ಥವಾಗುತ್ತಿತ್ತು ಈಗ ರಿಪೇರಿ ಮಾಡಿದ ಮೇಲೆ ಅದರ ಪರಿಣಾಮವಾಗಿ 3 ಕೂಸೆಕ್ಸ್‌ಗೆ ಇಳಿದಿದೆ. ಅಂದರೆ 50 ಪರ್ಸೆಂಟಿಗೂ ಕಡಿಮೆ ನೀರು ವೇಸ್ಟ್ ಆಗುವುದು ಕಡಿಮೆಯಾಗಿದೆ. ಇನ್ನು ಉಳಿದ ಕೆಲಸವನ್ನು ಕೂಡ ತಕ್ಷಣ ಮಾಡಿ ಸೀಪೇಜ್ ಅನ್ನು ಪೂರ್ತಿ ನಿಲ್ಲಿಸುವುದಕ್ಕೆ ಎಲ್ಲಾ ಪ್ರಯತ್ನಗಳಾಗಿವೆ. ಇದೆಲ್ಲಾ ಸೀಪೇಜ್ ನಿಲ್ಲಿಸುವುದಕ್ಕೆ 80 ಲಕ್ಷ ರೂಪಾಯಿಗಳಲ್ಲಿ ಈ ಪೂರ್ತಿ ಕೆಲಸವನ್ನು ಮುಗಿಸಬಹುದು. ಇನ್ನು ಪಾಯಿಂಟಿಂಗ್ ವರ್ಕ್ ಅಂದರೆ ಎಲ್ಲೆಲ್ಲಿ ಒಳಗೆ ತೂತಾಗಿ ನೀರು ಹೋಗುತ್ತದೆಯೋ ಅಂತಹ ಕಡೆ ಮುಚ್ಚುವುದಕ್ಕೆ 2 ಕೋಟಿ ರೂಪಾಯಿ ಬೇಕಾಗುತ್ತದೆ. ಈ ಒಡ್ಡನ್ನು ಬಿಗಿ ಮಾಡುವುದಕ್ಕೋಸ್ಕರ ಶಕ್ತಿಯುತವಾಗಿ ಮಾಡುವುದಕ್ಕೆ ಎಲ್ಲಾ ಸೇರಿ ಒಟ್ಟು 3. ಕೋಟಿ ರೂಪಾಯಿಯಲ್ಲಿ ಕೆಲಸವಾಗುತ್ತದೆಂದು ಇಂಜಿನಿಯರ್ಸ್ ಹೇಳಿದ್ದಾರೆ. ಪರಿಹಾರ ಕೊಟ್ಟಿಲ್ಲವೆಂದು ವಿರೋಧ ಪಕ್ಷದ ನಾಯಕರು ಹೇಳಿದರು ಅದು ಲೋಕ್ ಅದಾಲತ್ ಮುಖಾಂತರ 6 ಕೋಟಿ 20 ಲಕ್ಷ ಕೊಡಬೇಕೆಂದು ತೀರ್ಮಾನವಾಗಿ, ಕಂದಾಯ ಇಲಾಖೆಗೆ ಕಳಿಸಿದ್ದಾರೆ. ಕಂದಾಯ ಇಲಾಖೆಯಲ್ಲಿ ತಕ್ಷಣದಲ್ಲಿ ಒಪ್ಪಿಗೆ ಬಂದ ತಕ್ಷಣ 6 ಕೋಟಿ 20 ಲಕ್ಷ ರೂಪಾಯಿಗಳನ್ನು ಆದಷ್ಟು ಬೇಗ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕಳುಹಿಸುತ್ತೇನೆ. ಆದ್ದರಿಂದ ಪತ್ರಿಕೆಯಲ್ಲಿ ಯಾರೋ ಕೆಲವರ ಅಭಿಪ್ರಾಯವನ್ನು ಮಾತ್ರ ತೆಗೆದುಕೊಂಡು ಬರೆದಿದ್ದಾರೆಂದು ಕಾಣುತ್ತದೆ ಗಾಬರಿಯಾಗುವಂತಹ ಕಾರಣ ಇಲ್ಲ. ನಮ್ಮ ಇಂಜಿನಿಯರುಗಳು ಕೆಲಸಗಾರರು ಎಲ್ಲಾ ಆಯಾಯ ಕಾಲದಲ್ಲಿ ಕ್ಲುಪ್ತವಾದ ಕಾಲದಲ್ಲಿ ಕ್ರಮ ತೆಗೆದುಕೊಂಡು ಲಿಂಗನಮಕ್ಕಿ ಒಡ್ಡನ್ನು ಮತ್ತು ಪವರ್ ಜನರೇಟ್ ಯೂನಿಟ್ ಎಲ್ಲಾ ಯೋಗ್ಯ ರೀತಿಯಲ್ಲಿ ಕೆಲಸ ಮಾಡುವ ಒಂದು ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಅದು ಯಶಸ್ವಿಯಾಗಿ ನಡೆಯುತ್ತಿದೆ.

ಉಪಾಧ್ಯಕ್ಷರು:– ಇನ್ನೊಂದು ಹೇಳಿಕೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಪತ್ರಿಕೆಗಳಲ್ಲಿ ಬಂದಿರುವ ಸುದ್ದಿ ಸತ್ಯಕ್ಕೆ ದೂರವಾಗಿದೆ ಅಲ್ಲಿ ಏನೂ ನೆಡದೆ ಇಲ್ಲ ಸೀಪೇಜಾಗುತ್ತಿಲ್ಲ ಏನೂ ಡ್ಯಾಮೇಜಾಗುತ್ತಿಲ್ಲ ಎಲ್ಲಾ ಸರಿಯಾಗಿದೆ ಎಂದು ನಮ್ಮ ಅಧಿಕಾರಿಗಳೆಲ್ಲಾ ಸರಿಯಾಗಿ ಮಾಡಿದ್ದಾರೆ ಎನ್ನತಕ್ಕಂತಹ ಭಾವನೆಯಿಂದ ಹೇಳುತ್ತಿದ್ದೀರಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಸೀಪೇಜ್ ಆಗಿಲ್ಲವೆನ್ನುವ ಮಾತನ್ನು ಹೇಳಲಿಲ್ಲ. ಸೀಪೇಜ್ ಕಡಿಮೆ ಮಾಡಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದು ಸರಿಯಿಲ್ಲವೆಂದು ಹೇಳಿದರೆ ಹೇಗೆ? ಕನಿಷ್ಟ ಪಕ್ಷ ಪತ್ರಿಕೆಗಳಲ್ಲಿ ಬಂದಿರುವುದರಿಂದ ಸರ್ಕಾರದ ಗಮನಕ್ಕೆ ನಾವು ತರಲಿಕ್ಕೆ ಅನುಕೂಲವಾಯಿತು.